ಸಿರಿಕನ್ನಡ

# ಸಂಕಲ್ಪ ಗೀತೆ ಸಾರಾಂಶ

**********************



ಜಿ.ಎಸ್.ಶಿವರುದ್ರಪ್ಪನವರು

$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$


ಪ್ರಯತ್ನ

ಬಸವರಾಜ.ಟಿ.ಎಂ

ಕನ್ನಡ ಭಾಷಾ ಶಿಕ್ಷಕರು

ಸರ್ಕಾರಿ ಪ್ರೌಢಶಾಲೆ, ರೂಪನಗುಡಿ

ಬಳ್ಳಾರಿ ಪೂರ್ವ ವಲಯ


**********************************************************************

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.** **1x4=4**

**ಸುತ್ತಲು ಕವಿಯುವ ಕತ್ತಲೆಯೊಳಗೆ**

**ಪ್ರೀತಿಯ ಹಣತೆಯ ಹಚ್ಚೋಣ**

**ಬಿರುಗಾಳಿಗೆ ಹೊಯ್ದಾಡುವ ಹಡಗನು**

**ಎಚ್ಚರದಲಿ ಮುನ್ನಡೆಸೋಣ**

ಈ ಪದ್ಯದಲ್ಲಿ ಎರಡು ಮುಖ್ಯ ತತ್ವಗಳನ್ನು ನೋಡಬಹುದು ಅವುಗಳೆಂದರೆ

1) ಬೆಳಕಿನ ತತ್ವ 2) ಪ್ರೀತಿಯ ತತ್ವ .

" ಸುತ್ತಲು ಕವಿಯುವ ಕತ್ತಲೆಯೊಳಗೆ ಪ್ರೀತಿಯ ಹಣತೆಯ ಹಚ್ಚೋಣ " ಅಂದರೆ ಇಲ್ಲಿ ಜಾತೀಯತೆ, ಮತ, ಭಾಷೆ, ಬಣ್ಣ, ಅಜ್ಞಾನ, ಮೂಢನಂಬಿಕೆಗಳೆಂಬ ಕತ್ತಲೆಯು ನಮ್ಮ ಸುತ್ತಲೂ ಕವಿದಿರುತ್ತದೆ, ಆದುದರಿಂದ ಆ ಕತ್ತಲೆಯನ್ನು ಓಡಿಸಲು ಬೆಳಕಿನ (ಅರಿವಿನ) ಅವಶ್ಯಕತೆಯಿದೆ. ಬೆಳಕನ್ನು ಬೀರಲು ಪ್ರೀತಿಯಿಂದ ಹಣತೆಯನ್ನು ಹಚ್ಚಬೇಕಾಗಿದೆ ಎಂದು ಮೊದಲನೆಯ ಬೆಳಕಿನ ತತ್ವವನ್ನು ಸ್ಪಷ್ಟಪಡಿಸಬಹುದು.. ಅಂತಹ ಹಣತೆಯನ್ನು ಹಚ್ಚಿ "ಬಿರುಗಾಳಿಗೆ ಸಿಕ್ಕು ಹೊಯ್ದಾಡುವಂತಹ ಹಡಗನ್ನು ಎಚ್ಚರಿಕೆಯಿಂದ ಮುಂದೆ ನಡೆಸಿ ದಡವನ್ನು ಸೇರಿಸೋಣ." ಅಂದರೆ ಸಂಸಾರ ಸಾಗರದಲ್ಲಿ ಅಜ್ಞಾನದ ಬಿರುಗಾಳಿಗೆ ಹೊಯ್ದಾಡುತ್ತಾ ಎತ್ತೆತ್ತಲೂ ಸಾಗುತ್ತಿರುವ ಬಾಳನೌಕೆಯನ್ನು ಎಚ್ಚರಿಕೆಯಿಂದ ಗುರಿಯತ್ತ ನಡೆಸೋಣ ಎಂದು ತಮ್ಮ ಎರಡನೆಯ ಪ್ರೀತಿ ತತ್ವವನ್ನು ಪ್ರತಿಪಾದಿಸಬಹುದು.

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.** **1x4=4**

**ಕಲುಷಿತವಾದೀ ನದೀ ಜಲಗಳಿಗೆ**

**ಮುಂಗಾರಿನ ಮಳೆಯಾಗೋಣ**

**ಬರಡಾಗಿರವೀ ಕಾಡು ಮೇಡುಗಳ**

**ವಸಂತವಾಗುತ ಮುಟ್ಟೋಣ**

ಆಧುನಿಕ ಮಾನವನ ಹಸ್ತಕ್ಷೇಪದಿಂದ ಕಲುಷಿತವಾದ ನದಿಗಳ ಶುದ್ಧಿಕರಣ ಮಾಡಲು ಭೋರ್ಗರೆಯುವ ಮುಂಗಾರಿನ ಮಳೆಯೇ ಬೇಕು. ಅಂದರೆ ಅಲ್ಲಲ್ಲಿ ನಿಂತ ಕಲುಷಿತ ನೀರು, ಕೊಚ್ಚೆಗಳನ್ನು ಕೊಚ್ಚಿ ತೆಗೆದು ಶುದ್ಧೀಕರಿಸಬಹುದು. ಹಾಗೆಯೇ ಕಲ್ಮಷಗಳಿಂದ ಕೂಡಿದ ಮನುಷ್ಯರ ಮನಸ್ಸುಗಳನ್ನು ಪ್ರೀತಿಯ. ಮೂಲಕ ಹಸನಗೊಳಿಸೋಣ. **"ಬರಡಾಗಿರವೀ ಕಾಡು ಮೇಡುಗಳ ವಸಂತವಾಗುತ ಮುಟ್ಟೋಣ"** ಅಂದರೆ ಆಧುನೀಕರಣ ಜಾಗತೀಕರಣ,ಕೈಗಾರೀಕರಣ, ಡಾಂಬರೀಕರಣ, ಯಾಂತ್ರೀಕರಣಗಳಿಂದಾಗಿ ಕಾಡುಗಳು ನಾಶವಾಗಿ ಪರಿಸರ ಬರಡಾದ ಮರುಭೂಮಿಯಂತಾಗಿದೆ. ಅಲ್ಲಿ ಗಿಡಮರಗಳನ್ನು ಬೆಳೆಸುತ್ತ, ಬೆಳೆಸುವ ಅವಶ್ಯಕತೆಯನ್ನು ಜನರಲ್ಲಿ ಜಾಗೃತಗೊಳಿಸುವ ಕಾರ್ಯವನ್ನು ಮಾಡೋಣ ಎನ್ನಬಹುದು. ಅಂದರೆ ನಾಗರೀಕತೆಯ ಬರಾಟೆಯಲ್ಲಿ ಮೌಲ್ಯಗಳು ಕುಸಿಯುತ್ತಿವೆ,ಅಂತಹ ಹೃದಯದಲ್ಲಿ ಮೌಲ್ಯಗಳೆಂಬ ಸಸಿಗಳನ್ನು ನೆಟ್ಟು ,ಪ್ರೀತಿಯ ನೀರನ್ನು ಎರೆಯುತ್ತ ಬದುಕನ್ನು ವಸಂತವಾಗಿಸೋಣ ಎಂದು ಬದುಕು ಹಸನುಗೊಳಿಸುವ ಮೌಲ್ಯವನ್ನು ಕವಿ ಜಿ.ಎಸ್.ಶಿವರುದ್ರಪ್ಪನವರು ಹೇಳಿದ್ದಾರೆ.

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧಿರಿಸಿ ಸಾರಾಂಶ ಬರೆಯಿರಿ.** **1x4=4**

**ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ**

**ಹೊಸ ಭರವಸೆಗಳ ಕಟ್ಟೋಣ**

**ಮನುಜರ ನಡುವಣ ಅಡ್ಡಗೋಡೆಗಳ**

**ಕೆಡವುತ ಸೇತುವೆಯಾಗೋಣ.**

ಬಡತನ, ಅಜ್ಞಾನ, ಮೂಢನಂಬಿಕೆ, ಧರ್ಮ, ಭಾಷೆ, ಜಾತಿಗಳಿಂದ ಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕಲು ಆಸರೆ ನೀಡಿ ಮೇಲೆ ತರಬೇಕು. ಅವರ ಮನಸ್ಸಿನಲ್ಲಿ ಬದುಕುವ ಹೊಸ ಭರವಸೆಗಳನ್ನು ಕೊಡಬೇಕು. ಹಾಗೆಯೇ ಮನುಷ್ಯರ ನಡುವೆ ಜಾತಿ, ಧರ್ಮ, ಭಾಷೆ, ವರ್ಣಗಳಿಂದ ಆವೃತವಾದ ಅಡ್ಡಗೋಡೆಗಳನ್ನು ಕೆಡವಿಹಾಕಬೇಕು. ವಿಶ್ವದ ಜನರೆಲ್ಲರನ್ನು ಒಂದಾಗಿಸುವ ಪ್ರೀತಿಯ, ಸ್ನೇಹದ ಸೇತುವೆಯನ್ನು ನಿರ್ಮಿಸೋಣವೆಂದು ಕವಿ ಕವಿ ಜಿ.ಎಸ್.ಶಿವರುದ್ರಪ್ಪನವರು ಸಮಾನತೆಯ ಮೌಲ್ಯವನ್ನು ಹೇಳಿದ್ದಾರೆ

ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. **1X4=4**

**ಮತಗಳೆಲ್ಲವೂ ಪಥಗಳು ಎನ್ನುವ**

**ಹೊಸ ಎಚ್ಚರದೊಳು ಬದುಕೋಣ**

**ಭಯ ಸಂಶಯದೊಳು ಕಂದಿದ ಕಣ್ಣೊಳು**

**ನಾಳಿನ ಕನಸನು ಬಿತ್ತೋಣ.**

ಭಾರತದಲ್ಲಿ ವಿವಿಧ ಮತಪಂಥಗಳಿದ್ದು ಬೇರೆಬೇರೆ ರೀತಿಯ ಆಚರಣೆ, ಸಂಪ್ರದಾಯಗಳು ಇವೆ.ಆದರೂ ವಿವಿಧತೆಯಲ್ಲಿ ಏಕತೆಯನ್ನು ಕಾಣುವ ದೇಶ ಭಾರತ .ಇಂತಹ ಮತಪಂಥಗಳೆಲ್ಲವೂ ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ, ಮುಕ್ತಿಯನ್ನು ನೀಡಬಲ್ಲ, ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿಯಬೇಕು. ಅಸಮಾನತೆ, ಭಯೋತ್ಪಾದಕತೆ, ಶೋಷಣೆ ಇತ್ಯಾದಿಗಳಿಂದ ಭಯ-ಭೀತಿಗೊಂಡು, ನಾಳಿನ ಬದುಕಿನ ಬಗ್ಗೆ ಸಂಶಯಗೊಂಡು ನಿರಾಸೆ ಹೊಂದಿದ ಮನಸ್ಸುಗಳಿಗೆ ಮುಂದಿನ ಬದುಕಿಗೆ ಉತ್ತಮ ಕನಸನ್ನು ಅವರಲ್ಲಿ ಬಿತ್ತಿ, ಧೈರ್ಯ ನೀಡಬೇಕೆಂದು ಸಮಾನತೆಯ ತತ್ವ ಮತ್ತು ಒಳ್ಳೆ ಬದುಕಿನ ಭರವಸೆಯ ಬಗ್ಗೆ ಜಿ.ಎಸ್.ಶಿವರುದ್ರಪ್ಪನವರು ಅರಿವು ಮೂಡಿಸಿದ್ದಾರೆ.